# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1126 (1189) |
| ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | 17-12-2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಹುಮನಾಬಾದ್ ಉಪ ನೋಂದಣಿ ಕಛೇರಿಯಲ್ಲಿ ಚಂದನ ಶೈಕ್ಷಣಿಕ ಮತ್ತು ದತ್ತಿ ಟ್ರಸ್ಟ್‌ಗೆ ಆಸ್ತಿ ವರ್ಗಾವಣೆಯ ನೋಂದಣಿ ಸಮಯದಲ್ಲಿ ರೂ.10.57 ಕೋಟಿ ರೂ.ಗಳ ನೋಂದಾಣಿ ಶುಲ್ಕ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಸದರಿ ಪ್ರಕರಣದಲ್ಲಿ ರೂ.8,50,193/- ಗಳಷ್ಟು ಕೊರತೆ ಶುಲ್ಕ ಉಂಟಾಗಿರುತ್ತದೆ.<br><br>ಹುಮನಾಬಾದ್ ಉಪನೋಂದಣಿ ಕಛೇರಿಯಲ್ಲಿ ಹುಮನಾಬಾದ್ ಪಟ್ಟಣದ ಸರ್ವೆ ನಂ.159/6 ರಲ್ಲಿನ 01 ಎಕರೆ ವಿಸ್ತೀರ್ಣದ ಪರಿವರ್ತಿತ ಜಮೀನಿನ ಸ್ವತ್ತನ್ನು ಶ್ರೀ ಪದ್ಮಾಕರ್ ತಂದೆ ಶಂಕರ್ ರಾವ್ ಪಾಟೀಲ್ ರವರು ಚಂದನ OBC Educational & Charitable Trust (R)ರ ಪರವಾಗಿ ಕಾರ್ಯದರ್ಶಿ ಶ್ರೀ ಪ್ರತೀಕ ಪದ್ಮಾಕರ್ ಪಾಟೀಲ್ ರವರಿಗ ಕ್ರಯ ಪತ್ರವನ್ನು ಬರೆದು ಕೊಟ್ಟಿದ್ದು, ಸದರಿ ಕ್ರಯ ಪತ್ರವು ದಿನಾಂಕ:12.07.2019 ರಂದು ದಸ್ತಾವೇಜು ಸಂಖ್ಯೆ:1937/2019-20 ರನ್ವಯ ನೋಂದಣಿ ಯಾಗಿರುತ್ತದೆ ಮತ್ತು ಸದರಿ ಕ್ರಯ ಪತ್ರಕ್ಕೆ ದಿನಾಂಕ:24.02.2020 ರಂದು ದಸ್ತಾವೇಜು ಸಂಖ್ಯೆ:7039/2019-20 ರನ್ವಯ ತಿದ್ದುಪಡಿ ಪತ್ರವನ್ನು ನೋಂದಾಯಿಸಲಾಗಿರುತ್ತದೆ.<br><br>ಮಹಾಲೇಖಪಾಲರ ದಿನಾಂಕ:22.08.2024ರ ಆಡಿಟ್ ಆಕ್ಷೇಪಣೆಯಲ್ಲಿ ಸದರಿ ದಸ್ತಾವೇಜುಗಳ ನೋಂದಣಿ ಸಂದರ್ಭದಲ್ಲಿ ಸ್ವತ್ತಿನ ಮಾರ್ಗಸೂಚಿ ದರಗಳನ್ನು ಸರಿಯಾಗಿ ಪರಿಗಣಿಸದೇ ಸ್ವತ್ತಿನ ಮೌಲ್ಯವನ್ನು ಅಪಮೌಲ್ಯಗೊಳಿಸಿ ನೋಂದಾಯಿಸಿರುವುದರಿಂದ ರೂ.5,76,014/- ಗಳಷ್ಟು ಕೊರತೆ ಶುಲ್ಕ ಉಂಟಾಗಿರುವುದಾಗಿ ತಿಳಿಸಿರುತ್ತಾರೆ.<br><br>ಮಹಾಲೇಖಪಾಲರ ಆಡಿಟ್ ಆಕ್ಷೇಪಣೆಯನ್ವಯ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46-ಎ ರನ್ವಯ ಮತ್ತು ನೋಂದಣಿ ಕಾಯ್ದೆ 1908ರ ಕಲಂ 80-ಎ ರನ್ವಯ ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆ ನಡೆಸಿ, ಸದರಿ ಸ್ವತ್ತಿನ ಮೌಲ್ಯವನ್ನು ನಿರ್ಧರಿಸಿ, ಪ್ರಕರಣದಲ್ಲಿ ರೂ.8,50,193/- ಕೊರತೆ |

| | | |
|---|---|---|
| | | ಶುಲ್ಕ ಉಂಟಾಗಿರುವುದಾಗಿ ದಿನಾಂಕ:03.09.2024 ರಂದು ಪಕ್ಷಕಾರರಿಗೆ ಪಾವತಿಸುವಂತೆ ಸೂಚಿಸಿ ಜಿಲ್ಲಾ ನೋಂದಣಾಧಿಕಾರಿಗಳು ಬೀದರ್ ರವರು ಆದೇಶ ಹೊರಡಿಸಿರುತ್ತಾರೆ. |
| ಆ | ಸರ್ಕಾರಕ್ಕೆ ನಷ್ಟ ಮಾಡಿರುವ ಉಪ ನೋಂದಣಾಧಿಕಾರಿಯವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು: ಸದರಿಯವರನ್ನು ಅಮಾನತ್ತುಗೊಳಿಸಲಾಗಿದೆಯೇ:ಇಲ್ಲವಾಗಿದ್ದಲ್ಲಿ ಯಾವಾಗ ಅಮಾನತ್ತುಗೊಳಿಸಲಾಗುವುದು; (ವಿವರ ನೀಡುವುದು). | ಸದರಿ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ಅಪಮೌಲ್ಯಗೊಳಿಸಿ ಹಾಗೂ ಇತರೆ ಕಾರಣಗಳಿಂದ ಮತ್ತು ನಿರ್ಲಕ್ಷತೆಯಿಂದ ರಾಜಸ್ವ ನಷ್ಟ ಉಂಟು ಮಾಡಿರುವ ಸಂಬಂಧಪಟ್ಟ ಉಪ ನೋಂದಣಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿ ವರದಿ ಸಲ್ಲಿಸುವಂತೆ ಸಂಬಂಧಪಟ್ಟ ಜಿಲ್ಲಾ ನೋಂದಣಾಧಿಕಾರಿಗಳಿಗೆ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ದಿನಾಂಕ:06.09.2025ರ ಪತ್ರದಲ್ಲಿ ಸೂಚಿಸಿರುತ್ತಾರೆ.<br><br>ಸದರಿ ಪ್ರಕರಣದಲ್ಲಿ ರಾಜಸ್ವ ನಷ್ಟ ಉಂಟು ಮಾಡಿದ ಪ್ರಭಾರ ಉಪ ನೋಂದಣಾಧಿಕಾರಿಗೆ ದಿನಾಂಕ:06.12.2025 ರಂದು ಕಾರಣ ಕೇಳುವ ನೋಟಿಸನ್ನು ಜಾರಿಗೊಳಿಸಲಾಗಿದ್ದು, ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| ಇ | ಈ ನಷ್ಟದ ಮೊತ್ತವನ್ನು ಸಂಬಂಧಿಸಿದ ಉಪ ನೋಂದಣಾಧಿಕಾರಿಯಿಂದಲೇ ವಸೂಲು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವಾಗ ವಸೂಲು ಮಾಡಲಾಗುವುದು? (ವಿವರ ನೀಡುವುದು). | ಜಿಲ್ಲಾ ನೋಂದಣಾಧಿಕಾರಿಗಳು ಬೀದರ್ ರವರು ಸದರಿ ದಸ್ತಾವೇಜುಗಳ ನೋಂದಣಿಯಿಂದ ಉಂಟಾದ ಕೊರತೆ ಶುಲ್ಕ ರೂ.8,50,193/-ಗಳನ್ನು ಭರಿಸುವಂತೆ ಪಕ್ಷಕಾರರಿಗೆ ಸೂಚಿಸಿ ಆದೇಶ ಹೊರಡಿಸಿರುತ್ತಾರೆ.<br><br>ಸದರಿ ಕೊರತೆ ಶುಲ್ಕವನ್ನು ಭೂ ಕಂದಾಯ ಬಾಕಿ ಎಂದು ವಸೂಲಾಯಿಸಲು ಜಿಲ್ಲಾ ನೋಂದಣಾಧಿಕಾರಿ ಬೀದರ್ ರವರು ಜಿಲ್ಲಾಧಿಕಾರಿಗಳು ಬೀದರ್ ರವರನ್ನು ಕೋರಿರುತ್ತಾರೆ. ಅದರಂತೆ ಜಿಲ್ಲಾಧಿಕಾರಿಗಳು, ಬೀದರ್ ರವರು ಸಂಬಂಧಪಟ್ಟ ತಹಶೀಲ್ದಾರರಿಗೆ ಸೂಚಿಸಿದ್ದು, ಕೊರತೆ ಶುಲ್ಕಗಳನ್ನು ವಸೂಲಾಯಿಸಲು ಕ್ರಮವಹಿಸಲಾಗುತ್ತಿರುತ್ತದೆ. |

**ಕಂಇ/403/ಎಂಎನ್ಎಸ್ಎ/2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು